ಕರ್ನಾಟಕ ವಿಧಾನ ಸಭೆ

ಬುಧವಾರ 24 ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :– ಕುಣಿಗಲ್ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 196 (1102)

ಶ್ರೀ ಎಸ್. ಪಿ. ಮುದ್ದಹನುಮೆಗೌಡ (ಕುಣಿಗಲ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 4-12-95 ರಂದು ಅಂದಿನ ಮುಖ್ಯಮಂತ್ರಿಗಳು ಕುಣಿಗಲ್ ಸರ್ಕಾರಿ ಆಸ್ಪತ್ರೆಯನ್ನು ಒಂದು ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ : ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಮೌಕಿಕವಾಗಿ ಸಲಹೆ ಮಾಡಿರುತ್ತಾರೆ.

ಆ) ವಿಶ್ವಬ್ಯಾಂಕ್ ನೊಡನೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳಬೇಕಾಗಿದೆ.

11-10 ಎ. ಎಂ.

ಶ್ರೀ ಟಿ. ಬಿ. ಜಯಚಂದ್ರ (ಶ್ರೀ ಎಸ್. ವಿ. ಮುದ್ದಹನುಮೇಗೌಡರ ಪರವಾಗಿ) :- ಹಿಂದಿನ ಮುಖ್ಯಮಂತ್ರಿಗಳು ಕುಣಿಗಲ್ ಸರ್ಕಾರಿ ಆಸ್ಪತ್ರೆಯನ್ನು ಒಂದು ನೂರು ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಮೌಖಿಕವಾಗಿ ಸಲಹೆ ಮಾಡಿದ್ದಾರೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಮೌಖಿಕವಾಗಿ ಮಾಡಿರತಕ್ಕಂತಹ ಸಲಹೆಯ ಸರಕಾರಿ ಆಜ್ಞೆ ಆಗುವುದು ಯಾವಾಗ? ಅಂದಿನ ಮುಖ್ಯ ಮಂತ್ರಿಗಳು ಈಗಿನ ಪ್ರಧಾನ ಮಂತ್ರಿಗಳಾಗಿರತಕ್ಕಂತೆರವರೇ ಮೊನ್ನೆ ಬೆಂಗಳೂರಿನಲ್ಲಿ ನಡೆದಂತಹ ವಿಶ್ವಬ್ಯಾಂಕಿನ ನೆರವಿನ ಆಡಿಯಲ್ಲಿ ಇರತಕ್ಕಂತಹ ಒಂದು ಆಸ್ಪತ್ರೆ ಯೋಜನೆಯ ಉದ್ಘಾಟನೆಯನ್ನು ಕೂಡ

ಮಾಡಿಹೋಗಿದ್ದಾರೆ. ಅವರು ಇದನ್ನು ಮಾಡಿರತಕ್ಕಂತಹ ಸಂದರ್ಭದಲ್ಲಿ ತಾವು ಕ್ರಮ ಕೈಗೊಳ್ಳಬೇಕಾಗಿತ್ತು. ಮಂತ್ರಿಗಳು ಉತ್ತರದಲ್ಲಿ ವಿಶ್ವಬ್ಯಾಂಕ್‌ನೊಡನೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆಂದಾಗ ಅದರ ಮುಂದೆ ಪ್ರಸ್ತಾವ ಇದೆ ಎಂದು ಅರ್ಥವಾಗುತ್ತದೆ. ವಿಶ್ವ ಬ್ಯಾಂಕಿನ ಅಡಿಯಲ್ಲಿ ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಹಾಗೂ ಅದರ ರೂಪು ರೇಷೆಗಳು ಏನು? ಎಷ್ಟು ಹಾಸಿಗೆಗಳ ಆಸ್ಪತ್ರೆಗಳನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯವಿದೆ?.

ಡಾ : ಹೆಚ್. ಸಿ. ಮಹದೇವಪ್ಪ :- ಕುಣಿಗಲ್ ತಾಲ್ಲೂಕಿನಲ್ಲಿ 30 ಹಾಸಿಗೆಗಳ ಆಸ್ಪತ್ರೆ ಇದ್ದು ಅದನ್ನು 50 ಹಾಸಿಗೆಗೆ ಮೇಲ್ದರ್ಜೆಗೇರಿಸಲು ವಿಶ್ವಬ್ಯಾಂಕಿನ ನೆರವಿನೊಂದಿಗೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಎಷ್ಟು ಆಸ್ಪತ್ರೆಗಳನ್ನು ತೆಗೆದು ಕೊಳ್ಳುತ್ತೀರಿ ಎಂದು ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳುತ್ತಿದ್ದಾರೆ. ರಾಜ್ಯದ ಬಹುತೇಕ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 3-4 ಹಂತಗಳಲ್ಲಿ ಈಗಾಗಲೇ ವಿಶ್ವ ಬ್ಯಾಂಕಿನ ಯೋಜನೆಗಳಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಅದನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಂಡಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ :- ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ಮಾತ್ರ 50 ಹಾಸಿಗೆಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆಂದು ತಾವು ಹೇಳಿದ್ದೀರಿ. ತಾಲ್ಲೂಕಿನಷ್ಟೇ ಮುಖ್ಯವಾಗಿರತಕ್ಕಂತಹ ಪ್ರದೇಶಗಳು ಬೇಕಾದಷ್ಟು ಇರುತ್ತವೆ. ತಾಲ್ಲೂಕಿಗಿಂತಲೂ ಉತ್ತಮವಾಗಿ ಇರತಕ್ಕಂತಹ ಪ್ರದೇಶಗಳು ಬೇಕಾದಷ್ಟು ಇರುತ್ತದೆ. ತಾಲ್ಲೂಕಿಗಿಂತಲೂ ಉತ್ತಮವಾಗಿ ಇರತಕ್ಕಂತಹವು ನಿಜವಾಗಲೂ ಆರೋಗ್ಯದ ದೃಷ್ಟಿಯಿಂದ ಸೌಲಭ್ಯ ಒದಗಿಸಬೇಕಾಗಿರುವ ಪ್ರದೇಶಗಳು ಇವೆ. ಅಂತಹ ಪ್ರಶ್ನೆಗಳನ್ನು ನೀವು ಕನ್‌ಸಿಡರ್ ಮಾಡುತ್ತೀರೋ?

ಅಧ್ಯಕ್ಷರು :- ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿರುವುದನ್ನು ಮಾಡುವುದಕ್ಕೇ 50 ಪರ್ಸೆಂಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದಲ್ಲದೆ ತಾಲ್ಲೂಕಿನಷ್ಟೇ ಮುಖ್ಯ ಇರುವುದು ಎಂದು ತಾವು ಕೇಳುತ್ತಿದ್ದೀರಿ. ಇದೇನು ನಿಮ್ಮದು ಉಪ ಪ್ರಶ್ನೆ?

ಶ್ರೀ ಟಿ. ಬಿ. ಜಯಚಂದ್ರ :- ತಾಲ್ಲೂಕು ಅಲ್ಲದೇ ಇರತಕ್ಕಂತಹವು ಹೆಚ್ಚು ಜನಸಂಖ್ಯೆ ಇರತಕ್ಕಂತಹ ಪ್ರದೇಶಗಳು ನಮ್ಮಲ್ಲಿ ಇವೆ. ಅಲ್ಲಿ ಏನಾದರೂ ತೆಗೆದು ಕೊಳ್ಳುವುದಕ್ಕೆ ಪ್ರಸ್ತಾಪ ಇದೆಯೇ? ನನ್ನ ಕ್ಷೇತ್ರದಲ್ಲಿ ಆಗಬೇಕಾಗಿದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಅಧ್ಯಕ್ಷರು :- ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲೇ 50 ಪರ್ಸೆಂಟ್ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಇನ್ನು ಅದಕ್ಕೆ ಬೇರೆ ಹೊರಟು ಬಿಟ್ಟರೆ.....

ಶ್ರೀ ಟಿ. ಬಿ. ಜಯಚಂದ್ರ :- ಕಳ್ಳಂಬೆಳ್ಳದಲ್ಲಿ ಒಂದು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತಿದ್ದೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ವಿಶ್ವಬ್ಯಾಂಕ್ ಅಡಿಯಲ್ಲಿ ಯಾವ್ಯಾವ

ಆಸ್ಪತ್ರೆಗಳನ್ನು ಸೇರಿಸಿದ್ದೇವೆ ಎನ್ನುವ ಪಟ್ಟಿಯನ್ನು ಎಲ್ಲಾ ಮಾನ್ಯ ಸದಸ್ಯರಿಗೂ ಒಂದು ವಾರದಲ್ಲಿ ಕೊಡುತ್ತೇನೆ. ನನ್ನ ಹತ್ತಿರ ಪಟ್ಟಿ ಇದೆ. ಅದರಿಂದ ಕಾಪಿಗಳನ್ನು ಮಾಡಿಸಿ ಎಲ್ಲಾ ಸದಸ್ಯರಿಗೂ ಕೊಡುತ್ತೇನೆ.

ಅಧ್ಯಕ್ಷರು :- ಯಾರ್ಯಾರು ಏನೇನು ಭರವಸೆಗಳನ್ನು ಕೊಟ್ಟಿರುತ್ತಾರೆ ಅದೆಲ್ಲ ವನ್ನೂ ಲಿಸ್ಟ್ ಮಾಡಿ ಈ ಸೆಷನ್‌ನಲ್ಲಿ ನನಗೆ ಕೊಡಿ. ನಾನು ತರಿಸಿಕೊಡುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ಬಹುತೇಕ ತಾಲ್ಲೂಕಿನ ಎಲ್ಲಾ ಆಸ್ಪತ್ರೆಗಳನ್ನು ಹಾಗೂ ಜಿಲ್ಲಾ ಆಸ್ಪತ್ರೆಗಳನ್ನು ಈ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಸೇರಿಸಿದ್ದೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 197 (901 (ಎ))

ವಿಷಯ :- ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಮೂಲಕ ಮಹಿಳೆಯರಿಗೆ ಸ್ವಯಂ ಉದ್ಯೋಗ.

ಶ್ರೀ ಅಶೋಕ ಎಸ್. ಕಾಟವೆ :- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಮೂಲಕ ಎಷ್ಟು ಜನ ಮಹಿಳೆಯರು ಹೊಲಿಗೆ ಕಸೂತಿ, ಬಾಸ್ಕೆಟ್ ಹೆಣೆಯುವಂತಹ ಇತರೆ ಸ್ವಯಂ ಉದ್ಯೋಗ ಕಲಿತಿದ್ದಾರೆ?

ಆ) ಇದಕ್ಕಾಗಿ 1995-96 ನೇ ಸಾಲಿಗೆ ಮಾಡಿದ ಖರ್ಚು ಎಷ್ಟು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು) :-

ಅ) 1995-96 ನೇ ಸಾಲಿಗೆ ಧಾರವಾಡ ಜಿಲ್ಲೆಯಲ್ಲಿ ಒಟ್ಟು 759 ಮಹಿಳೆಯರು ವಿವಿಧ ಕಸಬುಗಳಲ್ಲಿ ತರಬೇತಿ ಹೊಂದಿದ್ದಾರೆ.

ವಿವರಗಳು ಈ ಕೆಳಕಂಡಂತಿದೆ :-

ಕ್ರ.ಸಂ.	ಕಸುಬಿನ ಹೆಸರು	ತರಬೇತಿ ಹೊಂದಿದವರು
1.	ಹೊಲಿಗೆ	485
2.	ಕಸೂತಿ	95
3.	ಎಂಬ್ರಾಯಿಡರಿ	50
4.	ಸ್ಕೂಲ್ ಬ್ಯಾಗ್	10
5.	ರೆಕ್ಸಿನ್ ಬ್ಯಾಗ್ ತಯಾರಿಕೆ	20
6.	ಪಾಲಿವಸ್ತ್ರ	10
7.	ಉಲ್ಲನ್ ನಿಟ್ಟಿಂಗ್	26
8.	ತೆಂಗಿನ ನಾರು	63
	ಒಟ್ಟು	759